



ಇಷ್ಟಾರ್ಥಗಳ ನೆರವೇರಿಕೆಗೆ ದೇವಿಯಲ್ಲಿ ಕೋರಿಕೆ

ನೀರು ಕಬ್ಬಿಣದ ಆಕ್ಸೈಡ್ ತರಹ ಋತುಚಕ್ರದ ಸ್ರವಿಕೆಯಂತೆ ಕೆಂಪು ಬಣ್ಣದಲ್ಲಿ ಹರಿಯುತ್ತದೆ. ಬಹುಶಃ ಇದು ಪ್ರಾಚೀನ ಖಾಸಿ ಬಲಿಯ ಸ್ಥಳವಾಗಿದೆ. ಈ ಸಮಯದಲ್ಲಿ ಬ್ರಹ್ಮಪುತ್ರ ನದಿಯ ನೀರು ಕೆಂಪು ಬಣ್ಣಕ್ಕೆ ತಿರುಗುತ್ತದೆ ಎನ್ನಲಾಗಿದೆ.

ಪುರಾಣಗಳಲ್ಲಿ ಕಾಮಾಕ್ಯಳನ್ನು ಎಲ್ಲಾ ಆಸೆಗಳ ಫಲ ನೀಡುವವಳೆಂದು, ಶಿವನ ಕಿರಿಯ ವಧುವೆಂದು, ಮುಕ್ತಿ ನೀಡುವವಳೆಂದು ವಿವರಿಸಲಾಗಿದೆ. ಶಕ್ತಿದೇವಿ ಇಲ್ಲಿ ಕಾಮಾಕ್ಯ ಎಂದು ಹೆಸರುವಾಸಿಯಾಗಿದ್ದಾಳೆ. ಋತುಚಕ್ರದಲ್ಲಿರುವ ಮಹಿಳೆಯನ್ನು ಗೌರವಿಸುವ, ಪೂಜಿಸುವ, ಶ್ರೇಷ್ಠತೆ ಸಾರುವ ತಾಣವಿದು. ಮಹಿಳೆಯಲ್ಲಿನ ಅಂತಃಶಕ್ತಿಯನ್ನು ಪ್ರತಿನಿಧಿಸುವಂತೆ, ಅದಕ್ಕೊಂದು ಪೌರಾಣಿಕ ಚೌಕಟ್ಟನ್ನು ಒದಗಿಸುವ, ಋತುಸ್ರಾವದ ಮಹಿಳೆಯನ್ನು ಪ್ರತಿನಿಧಿಸುವ ದೇವತೆ ಕಾಮಾಕ್ಯ. ಋತುಚಕ್ರದಂತಹ ತೊಳಲಾಟದ ಸ್ಥಿತಿಯನ್ನು ಅನುಭವಿಸುವ ಮಹಿಳೆಗೆ ಒಂದು ಸಾರ್ವಜನಿಕ ಚೌಕಟ್ಟು, ಗೌರವವನ್ನು ಈ ದೇವತೆಯ ಮೂಲಕ ಕಲ್ಪಿಸಲಾಗಿದೆ.

‘ಹ್ಮಂ... ಯಹಾ ಆವೊಜಿ..., ಪಾಂಡಾ (ಅಸ್ಸಾಮಿ ಭಾಷೆಯಲ್ಲಿ ಪಂಡಿತರಿಗೆ ಇರುವ ಅಡ್ಡ ಹೆಸರು) ಜೀನೆ ಸಬ್ ಬೋಲಾ... ಆವೊಜಿ’ ಅನ್ನುತ್ತಲೆ, ಯುವಕನೊಬ್ಬ ಹಿಂದಿಯಲ್ಲಿ ಮಾತನಾಡುತ್ತ ಅಂಗಡಿ ಬಳಿ ಕರೆದೊಯ್ದ.

‘ಚಪ್ಪಲಿ ಇಲ್ಲಿ ಬಿಡಿ. ದೇವಿಗೆ ಪ್ರಸಾದದ ಬುಟ್ಟಿ (ಗೋಡಂಬಿ, ಬಾದಾಮ್, ಉತ್ತತ್ತಿಯ ಚೂರುಗಳು, ಪುಟ್ಟ ಬೆಂಡು, ಬತ್ತಾಸುಗಳು, ದುರ್ಗೆಯ ಅಚ್ಚೊತ್ತಿದ್ದ ಪುಟ್ಟ ನಾಣ್ಯ ಇದ್ದ ಬಿದಿರಿನ ಪುಟಾಣಿ ಬುಟ್ಟಿಯ ಮೇಲೆ ಪ್ಲಾಸ್ಟಿಕ್ ಹಾಳೆಯ ಹೊದಿಕೆ. ಕೇಸರಿ ಬಣ್ಣದ ಚಂಡು ಹೂವಿನ ಹಾರ ಹಾಗೂ ಗುಂಗಟ್) ತಗೊಳ್ಳಿ’ ಎಂದು ಕೈಗಿಟ್ಟು ‘₹ 400 ಕೊಡಿ’ ಎಂದ.

ನಾವು ಒಬ್ಬರೊಬ್ಬರ ಮುಖ ನೋಡಿಕೊಂಡೆವು. ‘ಇಲ್ಲಿಯ ತನಕ ಬಂದಿದೀವಿ, ಕೊಡಿ’ ಎಂದು ಮಾಧುರಿ ಬುಟ್ಟಿ ತೆಗೆದುಕೊಂಡರು. ಜನಜಾತ್ರೆಯ ನಡುವೆ ಅಗಲವಾದ ಮೆಟ್ಟಿಲುಗಳನ್ನು ಏರುತ್ತಾ ದೇಗುಲದ ಮುಖ್ಯ ಆವರಣದ ಬಾಗಿಲ ಬಳಿ ಬರುತ್ತಿದ್ದಂತೆ ಪಾಂಡಾ (ವಿಐಪಿ ದರ್ಶನ ಮಾಡುವವರಿಗೆ ನೆರವಾಗುವವ) ಎದುರಾದರು. ‘ಆವೊ ಇಧರ್, ಮೇಡಂ ಬೋಲಾ ನಾ, ಪೈಸೆಕಿ ಬಾರೇಮೇ’ ಅಂದ್ರು. ‘ಹ್ಮಾಂ ಜೀ’ ಅಂತ ತಲೆ ಅಲ್ಲಾಡಿಸುತ್ತ ಅವರ ಹಿಂದೆ ಹಿಂದೆಯೇ ಹೆಜ್ಜೆ ಹಾಕಿದೆವು.

ನಾವು ನಿಂತಿದ್ದ ಜಾಗದಲ್ಲಿ ಯಾವುದೋ ದೇಗುಲ/ಕೋಣೆಯ ದೊಡ್ಡ ಬಾಗಿಲು ಇತ್ತು. ಆಚೆ ಈಚೆಯ ಗೋಡೆಯಲ್ಲಿ ನಿಂತ ಭಂಗಿಯ ವಿಗ್ರಹಗಳ ಕೆತ್ತಲಾಗಿತ್ತು.

ಕಾಮಾಕ್ಯ ದೇವಿಯ ಗರ್ಭಗುಡಿಯತ್ತ ಹೆಜ್ಜೆ ಹಾಕಿದೆವು. ಬೆಳಕು ಮತ್ತಷ್ಟು ಮಂದವಾಯಿತು. ಕಡು ಕಪ್ಪು ಕಲ್ಲಿನ ದೇಗುಲವದು. ನಿಂತಿದ್ದ ಸಾಲು ಮುಂದೆ ಸಾಗಿತ್ತು. ಗರ್ಭಗುಡಿಯ ಬೃಹತ್ ಹಿತ್ತಾಳೆಯ ಬಾಗಿಲ ಬಳಿ ಬಂದಾಗ ಸುತ್ತ ಕತ್ತಲೆ ಆವರಿಸಿತ್ತು. ದಪ್ಪ ಸರಪಳಿಯ ಹಿಡಿಯುತ್ತ, ಮೆಲ್ಲ ಮೆಲ್ಲ ಮೆಟ್ಟಿಲು ಇಳಿದೆವು. ಕತ್ತಲೆಯ ಕರಗಿಸುತ್ತಿದ್ದ ದೊಡ್ಡ ಹಣತೆಯ ಬೆಳಕು, ಹೊಗೆ ಗೋಚರಿಸಿತು.

ಇಲ್ಲಿ ದೇವಿಯ ಮೂರ್ತಿ ಇಲ್ಲ. ಬದಲಿಗೆ ಹೆಣ್ಣಿನ ಗರ್ಭ ಮತ್ತು ಯೋನಿ ಹೋಲುವ ರೀತಿಯ ಶಿಲ್ಪವಿದೆ. ಅಲ್ಲಿಯೇ ಸದಾ ಹರಿಯುವ ನೀರಿನ ಚಿಲುಮೆ ಇದೆ. ಶಿಲ್ಪದ ಮೇಲೆ ಕೆಂಪು ಹೊದಿಕೆ, ಮೇಲೆ ಹೂಗಳನ್ನು ಹರಡಲಾಗಿತ್ತು. ‘ಚಿಂವ್... ಚಿಂವ್...’ ಎನ್ನುತ್ತಾ ಅತ್ತಿಂದ ಇತ್ತ, ಇತ್ತಿಂದ ಅತ್ತ ಇಲಿಗಳು ಓಡಾಡೋದು ಕಂಡಿತು. ಇದನ್ನೇ ದಿಟ್ಟಿಸಿ ನೋಡುವುದರೊಳಗೆ, ಮಂಡಿಯೂರಿ ಬಾಗಿ ನೀರಿನ ಚಿಲುಮೆ ಮುಟ್ಟಲು ಹೇಳಿದರು ಅಲ್ಲಿದ್ದ ಅರ್ಚಕರು. ಶಕ್ತಿ ರೂಪದ ದೇವಿಯನ್ನು ಮನದಲ್ಲೇ ಪ್ರತಿಷ್ಠಾಪಿಸಿಕೊಂಡು ಮುಂದೆ ಹೆಜ್ಜೆ ಹಾಕಿದೆವು.

ಪ್ರತಿಕ್ರಿಯಿಸಿ: feedback@sudha.co.in